ದಿ:08.07.2022 OS.No.78/2017 PW-1

ದಿ:08.07.2022 ರಂದು ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ಶ್ರೀ. ಸಿ ಕೆ ವಕೀಲರಿಂದ:

ನಾನು ಪ್ರಸ್ತುತ ದಾವೆಯನ್ನು ನಮ್ಮ ತಾಯಿಯ ಮನೆ ಕಡೆಯಿಂದ ಭಾಗ ಬರಬೇಕೆಂದು ದಾವೆ ಸಲ್ಲಿಸಿರುತ್ತೇನೆ. ನಮ್ಮ ತಂದೆಗೆ ನಾಲ್ಕು ಜನ ಹೆಣ್ಣು ಮಕ್ಕಳು ಒಬ್ಬನೇ ಗಂಡು ಮಗ. ನಾಲ್ಕು ಜನ ಹೆಣ್ಣು ಮಕ್ಕಳಲ್ಲಿ ನಾನೇ ದೊಡ್ಡವಳು. ನಮ್ಮ ತಂದೆ ನಾವು ನಾಲ್ಕು ಜನ ಹೆಣ್ಣು ಮಕ್ಕಳು ಮತ್ತು ಒಬ್ಬ ಗಂಡು ಮಕ್ಕಳು ಹುಟ್ಟಿದ ನಂತರವೂ ಬದುಕಿದ್ದರು ಎಂದರೆ ಸರಿ. ನನ್ನ ಮದುವೆ ಆಗಿ ಸುಮಾರು ಅರವತ್ತು ವರ್ಷಗಳು ಆಗಿವೆ. ನನ್ನ ಮದುವೆ ನಂತರ ನನ್ನ ತಂದೆ ಮೂರು ಜನ ಹೆಣ್ಣು ಮಕ್ಕಳಿಗೂ ಸಹ ಮಾಡಿರುತ್ತಾರೆ ನಮ್ಮ ಮದುವೆಗಳನ್ನು ನಮ್ಮ ತಂದೆಯವರೇ ಮಾಡಿಕೊಟ್ಟಿರುತ್ತಾರೆ. 5ನೇ ಪ್ರತಿವಾದಿಯ ಮದುವೆ ಯಾವ ವರ್ಷದಲ್ಲಿ ಆಯಿತು ಎಂದು ನನಗೆ ನೆನಪಿಲ್ಲ. 5ನೇ ಪ್ರತಿವಾದಿಯ ಮದುವೆ ಸಂದರ್ಭದಲ್ಲಿ ನಮ್ಮ ತಂದೆ ಬದುಕಿದ್ದರೇ ಎಂದರೆ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. 2ನೇ ಪ್ರತಿವಾದಿಯ ಮದುವೆ ಸಂದರ್ಭದಲ್ಲಿ ನಮ್ಮ ತಂದೆ ಬದುಕಿರಲಿಲ್ಲ. ನಿಮ್ಮ ತಂದೆ 1987ರಲ್ಲಿ ಮರಣ ಹೊಂದಿದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಮ್ಮ ತಂದೆ ಮೂಗರು ಎಂದರು ಸರಿ. ನಮ್ಮ ಸಂಸಾರವನ್ನು ನಮ್ಮ ತಾಯಿ ನಿಭಾಯಿಸುತ್ತಿದ್ದರು ನಮ್ಮ ತಾಯಿ ಈಗಲು ಜೀವಂತವಾಗಿದ್ದಾರೆ. 1ನೇ ಪ್ರತಿವಾದಿಗೆ ಸುಮಾರು 95 ರಿಂದ 100 ವರ್ಷ ವಯಸ್ಸಾಗಿದೆ ಎಂದರೆ ಸರಿ. ನಮ್ಮ ತಂದೆಯ ಮರಣಾನಂತರ 1ನೇ ಪ್ರತಿವಾದಿಯನ್ನು ಯಾರು ನೋಡಿಕೊಳ್ಳುತ್ತಿರಲಿಲ್ಲ ಅವರೇ ನಿಬಾಯಿಸಿಕೊಳ್ಳುತ್ತಿದ್ದರು 1 ಮತ್ತು 2 ನೇ ಪ್ರತಿವಾದಿ ಇಬ್ಬರು ಜೊತೆಯಲ್ಲಿಯೇ ಇದ್ದಾರೆ. ನಮ್ಮ ತಂದೆಯ ಮರಣಾನಂತರ 1 ಮತ್ತು 2 ನೇ

ಪ್ರತಿವಾದಿ ಇಬ್ಬರು ಜೊತೆಯಲ್ಲಿಯೇ ಇದ್ದಾರೆ. 1, 3, 4 ನೇ ಪ್ರತಿವಾದಿಯರನ್ನು 2ನೇ ಪ್ರತಿವಾದಿಯೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಇಂದಿಗೂ ಕೂಡ 1, 3, 4 ನೇ ಪ್ರತಿವಾದಿಯರನ್ನು 2ನೇ ಪ್ರತಿವಾದಿಯೇ ನೋಡಿಕೊಳ್ಳುತ್ತಿದ್ದಾರೆ ಎಂದರೆ ಈಗೇನಾದರೂ ನೋಡಿಕೊಳ್ಳುತ್ತಿದ್ದಾರೋ ಏನು ಗೊತ್ತಿಲ್ಲ. ನಮ್ಮ ತಂದೆಯ ಮರಣಕಾಲಕ್ಕೆ ಎಷ್ಟು ಜನ ಹೆಣ್ಣು ಮಕ್ಕಳಿಗೆ ಮದುವೆ ಆಗಬೇಕಿತ್ತು ಎಂದರೆ ಆದಾಗಲೇ ಹೆಣ್ಣು ಮಕ್ಕಳಿಗೆ ಮದುವೆ ಆಗಿತ್ತು ಎಂದು ನುಡಿಯುತ್ತಾರೆ. 5ನೇ ಪ್ರತಿವಾದಿಯ ಮದುವೆ 1998ರಲ್ಲಿ ಆಯಿತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 4ನೇ ಪ್ರತಿವಾದಿಯ ಗಂಡ ಮರಣ ಹೊಂದಿದ ನಂತರ ಅವರನ್ನು ಸಹ 2ನೇ ಪ್ರತಿವಾದಿಯೇ ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿಯಲ್ಲ. ಸದರಿ ದಾವೆಗೆ ಸಂಬಂಧಿಸಿದ ದಾಖಲಾತಿಗಳನ್ನು ನಾನೇ ಪಡೆದುಕೊಂಡಿರುತ್ತೇನೆ. ನಿಪಿ-1ನ್ನು ನಮ್ಮ ಊರಿನಲ್ಲಿ ನಾನೇ ಮಾಡಿಸಿದ್ದು ಎಂದು ನುಡಿಯುತ್ತಾರೆ. ನಿಪಿ-1ನ್ನು ಸುಮಾರು 4 ರಿಂದ 5 ವರ್ಷಗಳ ಹಿಂದೆ ಮಾಡಿಸಿರುತ್ತೇನೆ. 2ನೇ ಪ್ರತಿವಾದಿ ಮಾರಾಟ ಮಾಡಿರುವ ಸ್ವತ್ತಿನ ಸರ್ವೆ ನಂಬರ್ ಗಳು ನನಗೆ ಗೊತ್ತಿಲ್ಲ. ಒಂದು ಎಕರೆ ಇಪ್ಪತ್ತೈದು ಗುಂಟೆ ಒಂದು ಮತ್ತೊಂದು ಒಂದು ಎಕರೆ ಇಪ್ಪತ್ತು ಗುಂಟೆಯನ್ನು ಮಾರಾಟ ಮಾಡಿದ್ದಾರೆ ಎಂಬ ವಿಚಾರ ನನಗೆ ಗೊತ್ತು. ಯಾವ ವರ್ಷದಲ್ಲಿ ಮಾರಾಟ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ ಮಾರಾಟ ಮಾಡಿದ್ದಾರೆ ಎಂದು ತಿಳಿದ ನಂತರ ದಾವೆಯನ್ನು ಸಲ್ಲಿಸಿರುತ್ತೇನೆ. ಮಾರಾಟ ಮಾಡಿರುವ ಸ್ವತ್ತಿನ ದಾಖಲಾತಿಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರಬಹುದು ನನಗೆ ನೆನಪಿಲ್ಲ. ದಾವೆ ಸಲ್ಲಿಸುವ ಸಂದರ್ಭದಲ್ಲಿಯೂ ಯಾವ ವರ್ಷದಲ್ಲಿ ಸ್ವತ್ತುಗಳನ್ನು ಮಾರಾಟ ಮಾಡಿದ್ದಾರೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ಸ್ವತ್ತುಗಳನ್ನು ಯಾವ ಕಾರಣಕ್ಕಾಗಿ ಮಾರಾಟ ಮಾಡಿದ್ದಾರೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ದಾವಾ ಸ್ವತ್ತುಗಳನ್ನು 5ನೇ ಪ್ರತಿವಾದಿಯ ಮದುವೆಗಾಗಿ ಮತ್ತು 2ನೇ ಪ್ರತಿವಾದಿಯ ಮದುವೆಗೆ ಮಾಡಿದ ಸಾಲ ತೀರಿಸುವ ಸಲುವಾಗಿ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿ ಅದೆಲ್ಲ ಸುಳ್ಳು ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿಗೆ

ದುಡಿಯುವ ಶಕ್ತಿ ಇಲ್ಲದೇ *2*ನೇ ಮತ್ತು *5*ನೇ ಪ್ರತಿವಾದಿಗಳ ಮದುವೆಗಾಗಿ ದಾವಾ ಸ್ವತ್ತುಗಳನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ವಿಭಾಗವಾಗಿ ನಮ್ಮ ತಂದೆಗೆ ಬಂದಂತಹ ಸ್ವತ್ತಾಗಿರುತ್ತದೆ. ನಮ್ಮ ತಂದೆಗೆ ವಿಭಾಗವಾಗುವಾಗ *1.* ಒಂದು ಎಕರೆ ಇಪ್ಪತ್ತು ಗುಂಟೆ *2.* ಒಂದು ಎಕರೆ ಇಪ್ಪತ್ತು ಗುಂಟೆ *3.*ಒಂದು ಎಕರೆ ಇಪ್ಪತ್ತೈದು ಗುಂಟೆ *4.* ಒಂದು ಮನೆ ನಮ್ಮ ತಂದೆಗೆ ಬಂದಿತ್ತು. ಐಟಂ ನಂಬರ್ *3* ಸರ್ವೆ ನಂಬರ್ *18/3*ರ ಚೆಕ್ಕು ಬಂದಿ ಹೇಳಲು ನನಗೆ ನೆನಪಿಲ್ಲ. ದಾವೆಯಲ್ಲಿ ಚೆಕ್ಕು ಬಂದಿಯನ್ನು ನಮೂದು ಮಾಡಿದ್ದೇವೆ. ದಾವೆ ಸಲ್ಲಿಸುವ ಸಂದರ್ಭದಲ್ಲಿ ದಾವೆಗೆ ಸಹಿ ಮಾಡುವಾಗ ಚೆಕ್ಕು ಬಂದಿಗಳನ್ನು ನಾನು ತಿಳಿದುಕೊಂಡಿರುವುದಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಓ

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಚನ್ನಪಟ್ಟಣ